**ದಿನಾಂಕ: 12-12-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಜೆ.ವಿ.ಹೆಚ್. ವಕೀಲರಿಂದ**

1. ನಿಮ್ಮ ತಂದೆಯ ತಂದೆಯಾದ ಸುಬ್ರಾಯರವರು ಒಟ್ಟು 3 ಜನ ಅಣ್ಣತಮ್ಮಂದಿರು ಅವರುಗಳೆಂದರೆ ಸುಬ್ರಾಯಗೌಡ, ಸಾಹೇಬಗೌಡ ಮತ್ತು ಸಂಗಣ್ಣಗೌಡ ಎಂದರೆ ಸರಿ. ನಿಮ್ಮ ತಂದೆಯ ತಂದೆ ಹೆಸರು ಸುಬ್ರಾಯಗೌಡ ಎಂದರೆ ಸರಿ. ಸುಬ್ರಾಯಗೌಡನ ಅಣ್ಣತಮ್ಮಂದಿರು ಹಂಚಿಕೊಂಡ ನಂತರ ದಾವಾದ ಆಸ್ತಿಗಳು ಸುಬ್ರಾಯಗೌಡನಿಗೆ ಬಂದಿದೆ ಎಂದರೆ ಸರಿ. ದಾವಾ ಆಸ್ತಿಗಳು ನಿಮ್ಮ ಹಿರಿಯರ ಆಸ್ತಿಗಳು ಎಂದರೆ ಸರಿ. ಸುಬ್ರಾಯಗೌಡ ಯಾವಾಗ ತೀರಿಕೊಂಡಿದ್ದಾರೆಂದು ಗೊತ್ತಿಲ್ಲ. ನಿಮ್ಮ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು. ಇವರನ್ನು ಬಿಟ್ಟು ಬೇರೆ ಯಾರೂ ಮಕ್ಕಳು ಇಲ್ಲ ಎಂದರೆ ಮಕ್ಕಳು ಇಲ್ಲ ನಮ್ಮ ತಂದೆಗೆ ಮದುವೆ ಆಗಲಾರದೇ ಇನ್ನೊಂದು ಕುಟುಂಬ ಇರುತ್ತದೆ ಅವರು ತೀರಿಕೊಂಡಿರುತ್ತಾರೆ. ನಿಮ್ಮ ತಂದೆ 5-6 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಿಮ್ಮ ತಂದೆಗೆ ಸಂಬಂಧ ಇರಲಾರದೇ ಬಂದಿರುವವರ ಹೆಸರು ಬಸಮ್ಮ ಮತ್ತು ಅವರ ಮಕ್ಕಳು ಅನ್ನಪೂರ್ಣ ಮತ್ತು ಪ್ರಭಾವತಿ ಎಂದರೆ ಸರಿ. ನನ್ನ ತಾಯಿ ಹೆಸರು ಚೆನ್ನಮ್ಮ. ನನ್ನ ತಾಯಿ ಚೆನ್ನಮ್ಮ ತೀರಿಕೊಂಡು 12 – 13 ವರ್ಷ ಮೇಲೆ ಆಗಿರುತ್ತದೆ. ಬಸಮ್ಮ ತೀರಿಕೊಂಡು 10-12 ವರ್ಷ ಆಗಿರುತ್ತದೆ. ನಿಮ್ಮ ತಂದೆ ಬಸಪ್ಪ ನಿಮ್ಮ ಜೊತೆಯಲ್ಲಿ ಇದ್ದಾಗ ತೀರಿಕೊಂಡಿದ್ದಾರೆ ಎಂದರೆ ಅವರು ಬೇರೆ ಮನೆಯಲ್ಲಿ ಇದ್ದರು ಎಂದು ಉತ್ತರಿಸುತ್ತಾರೆ.

2. ನಿಮ್ಮ ಮದುವೆ ನಿಮ್ಮ ತಮ್ಮ, ವಾದಿ, ಅನ್ನಪೂರ್ಣ ಮತ್ತು ಪ್ರಭಾವತಿ ಯವರ ಮದುವೆಯನ್ನು ನಿಮ್ಮ ತಂದೆ ಮಾಡಿದ್ದಾರೆ ಎಂದರೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. 2019ರವರೆಗೆ ನಿಮ್ಮ ಮನೆಯಲ್ಲಿ ಹಿರಿಯ ಮನುಷ್ಯ ಎಂದರೆ ನಿಮ್ಮ ತಂದೆ ಬಸಪ್ಪಗೌಡ ಎಂದರೆ ಸರಿ. ನಿಮ್ಮ ತಂದೆಯವರಿಗೆ ಆದಾಯ ಎಂದರೆ ಒಕ್ಕಲುತನ ಎಂದರೆ ಸರಿ. ದಾವಾದ

ಆಸ್ತಿಗಳಲ್ಲಾಗಲೀ ಬೇರೆ ಯಾವುದೇ ಆಸ್ತಿಗಳಲ್ಲಾಗಲೀ ವಾದಿ ಬಸಮ್ಮಳಿಗೆ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ಸರಿ. ಪಾಲುಪತ್ರದಲ್ಲಿ ವಾದಿಯ ಸಹಿ ಇಲ್ಲ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಪಾಲುಪತ್ರದಲ್ಲಿ 4 ಮತ್ತು 5ನೇ ಪ್ರತಿವಾದಿಯ ಹೆಸರು ಮತ್ತು ಸಹಿ ಇಲ್ಲ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಚೆನ್ನಮ್ಮ ಮತ್ತು ಬಸಮ್ಮಳ ಹೆಸರು ಮತ್ತು ಸಹಿ ಇಲ್ಲ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಪಾಲು ಪತ್ರ ಮಾಡುವ ಸಮಯದಲ್ಲಿ ನಿಮ್ಮ ತಾಯಿ ಚೆನ್ನಮ್ಮ, ಬಸಮ್ಮ, ವಾದಿ ಮತ್ತು 4 ಮತ್ತು 5ನೇ ಪ್ರತಿವಾದಿಯರ ಒಪ್ಪಿಗೆ ಪಡೆದುಕೊಂಡಿಲ್ಲ ಎಂದರೆ ಸರಿ. ನಿಮ್ಮ ತಾಯಿ ಚೆನ್ನಮ್ಮ, ಬಸಮ್ಮ, ವಾದಿ ಮತ್ತು 4 ಮತ್ತು 5ನೇ ಪ್ರತಿವಾದಿಯರಿಗೆ ಪಾಲು ಪತ್ರದಲ್ಲಿ ಸಹಿ ಪಡೆಯಲು ಅಥವಾ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ತೊಂದರೆ ಇರಲಿಲ್ಲ ಎಂದು ಉತ್ತರಿಸುತ್ತಾರೆ.

3. 1976 ರಿಂದ ಇಲ್ಲಿಯವರೆಗೆ ವಾದಿ ಬಸಮ್ಮಳಿಗೆ ದಾವಾದ ಆಸ್ತಿಗಳಲ್ಲಿ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಪಾಲು ಪತ್ರ ಆಗುವಾಗ ನಿಮ್ಮ ವಯಸ್ಸು ಎಷ್ಟು ಇತ್ತು ಎಂದರೆ 16 ರಿಂದ 17 ವರ್ಷ ಇತ್ತು. ನಿಮ್ಮ ತಮ್ಮನಾದ ಸಂಗಣ್ಣನಿಗೆ ಪಾಲು ಪತ್ರ ಆಗುವಾಗ ಆತನಿಗೆ ವಯಸ್ಸು ಎಷ್ಟು ಇತ್ತು ಎಂದರೆ ಆರೇಳು ವರ್ಷ ಇತ್ತು. ಪಾಲು ಪತ್ರ ಆಗುವಾಗ ಆ ಸಮಯದಲ್ಲಿ ವಾದಿ ಬಸಮ್ಮಳಿಗೆ 12 ರಿಂದ 13 ವರ್ಷ ವಯಸ್ಸು ಇತ್ತು. ಪಾಲು ಪತ್ರ ಆಗುವಾಗ ಆ ಸಮಯದಲ್ಲಿ 4 ಮತ್ತು 5ನೇ ಪ್ರತಿವಾದಿಯರಿಗೆ ಎಷ್ಟು ವರ್ಷ ವಯಸ್ಸು ಇತ್ತು ಎಂದರೆ ಅವರು ಹುಟ್ಟಿರಲಿಲ್ಲ ಎಂದು ಉತ್ತರಿಸುತ್ತಾರೆ. ಪಾಲುಪತ್ರವನ್ನು ನೀವು ಬರೆಸಿಲ್ಲ ಎಂದರೆ ಸರಿ. ಪಾಲುಪತ್ರ ಬರೆಯುವ ಸಮಯದಲ್ಲಿ ಏನು ಬರೆದಿರುತ್ತಾರೆಂದು ಗೊತ್ತಿರಲಿಲ್ಲ ಎಂದರೆ ಸರಿ. ಪಾಲುಪತ್ರವನ್ನು ಆ ಸಮಯದಲ್ಲಿ ಯಾವ ಉದ್ದೇಶಕ್ಕಾಗಿ ಬರೆದಿರುತ್ತಾರೆ ಎಂದು ಗೊತ್ತಿರಲಿಲ್ಲ ಎಂದರೆ ಸರಿ. ನೀವೆಲ್ಲರೂ ಪಾಲು ಪತ್ರ ಆಗುವ ಸಮಯದಲ್ಲಿ ಸಣ್ಣವರಿದ್ದೀರಿ ನಿಮ್ಮ ಪರವಾಗಿ

ಪೋಷಕರೆಂದು ಯಾರಿಗಾದರೂ ನೇಮಕ ಮಾಡಿದ್ದಾರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಗಳು ಹಿರಿಯರ ಆಸ್ತಿಗಳಾಗಿದ್ದರಿಂದ ವಾದಿ ಬಸಮ್ಮಳಿಗೆ ಭಾಗದ ಹಕ್ಕು ಇದೆ ಎಂದರೆ ಏನು ಕೊಡಬೇಕಾಗಿತ್ತು ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ವಾದಿ ಬಸಮ್ಮಳಿಗೆ ನಿಮ್ಮ ತಂದೆಯಾಗಲೀ ನಿಮ್ಮ ಕುಟುಂಬದವರಾಗಲೀ ಏನು ಕೊಟ್ಟಿದ್ದೀರಿ ಎಂದರೆ 12 ತೊಲೆ ಬಂಗಾರ, 8 ರಿಂದ 10 ಸಾವಿರ ವರದಕ್ಷಿಣೆ ಬಟ್ಟೆ , ಬಾಂಡೆ ಸಾಮಾನು ಕೊಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ಇವುಗಳನ್ನು ಮದುವೆ ಖರ್ಚು ಎಂದು ಕೊಟ್ಟಿದ್ದೀರಾ ಅಥವಾ ಅವರ ಭಾಗದ ಪಾಲು ಎಂದು ಕೊಟ್ಟಿದ್ದೀರಾ ಎಂದರೆ ಮದುವೆಯ ಸಮಯದಲ್ಲಿ ಕೊಡುವುದಿತ್ತು ಕೊಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ಈ ರೀತಿ ಕೊಟ್ಟಿರುವ ಬಗ್ಗೆ ದಾಖಲೆ ಏನಾದರೂ ಬರೆದಿದ್ದೀರಾ ಎಂದರೆ ದಾಖಲೆ ಇಲ್ಲ ನಮ್ಮ ತಂದೆ ತಾಯಿ ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ.

4. ಸಾಮಾನ್ಯವಾಗಿ ತಂದೆ ತಾಯಿಯವರು ಅವರ ಮಕ್ಕಳ ಮದುವೆ ಮಾಡುವುದು ಅವರ ಕರ್ತವ್ಯ ಎಂದರೆ ಸರಿ. ಪಹಣಿಯಲ್ಲಿ ನಿಮ್ಮ ಮತ್ತು ಉಳಿದ ಪ್ರತಿವಾದಿಯರ ಹೆಸರು ಸೇರಿಸುವಾಗ ವಾದಿಗೆ ನೋಟಿಸು ಏನಾದರೂ ಕೊಟ್ಟಿದ್ದೀರಾ ಅಥವಾ ಅವರ ಒಪ್ಪಿಗೆ ಏನಾದರೂ ಪಡೆದುಕೊಂಡಿದ್ದೀರಾ ಎಂದರೆ ಏನೂ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯವರು ಜೀವಂತ ಇರುವವರೆಗೆ ನೀವು ಪಾಲುಪತ್ರ ಆಗುವ ಬಗ್ಗೆ ವಾದಿಗೆ ಹೇಳಿದ್ದೀರಾ ಎಂದರೆ ಅವರು ಊರಿನಲ್ಲೇ ಇದ್ದರು ಅವರಿಗೆ ಗೊತ್ತು ಎಂದು ಉತ್ತರಿಸುತ್ತಾರೆ. ಯಾವ ದಿನಾಂಕ ಯಾವ ವರ್ಷ ಯಾವ ತಿಂಗಳು ಪಾಲುಪತ್ರವನ್ನು ವಾದಿಗೆ ತೋರಿಸಿದ್ದೀರಿ ಎಂದರೆ 1977ರಲ್ಲಿ ವಾದಿಗೆ ನಾನು ಹೇಳಿರುತ್ತೇನೆ ತಾರೀಖು ಮತ್ತು ತಿಂಗಳು ನೆನಪಿಲ್ಲ.

5. ಈ ಕೇಸನ್ನು ಹಾಕಿದ ನಂತರ ನೀವು ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿರುವವರೆಗೆ ಪಾಲುಪತ್ರದ ಬಗ್ಗೆ ವಾದಿಗೆ ಗೊತ್ತಿರಲಿಲ್ಲ ಎಂದರೆ ಎಲ್ಲಾ ಅವರಿಗೆ

ಗೊತ್ತಿದೆ ಆದರೆ ಹೇಳಿಲ್ಲ ಎಂದು ಉತ್ತರಿಸುತ್ತಾರೆ. ನೀವು ಈ ದಾವೆಯಲ್ಲಿ ಪಾಲು ಪತ್ರ ಹಾಕಿದ ನಂತರ ವಾದಿಯು ಸದರಿ ಪಾಲುಪತ್ರಕ್ಕೆ ಸಹಿ ಇಲ್ಲ ಒಪ್ಪಿಗೆ ಇಲ್ಲ ಮತ್ತು ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ ಎಂದರೆ ಅವರಿಗೆ ಗುರುತು ಇದೆ ಆದರೆ ಹೇಳುತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಪಾಲು ಆಗಿಲ್ಲ ಹಾಗೂ ಪಾಲುಪತ್ರ ಆಗಿಲ್ಲದಿದ್ದರೂ ಸಹ ಪಾಲುಪತ್ರ ಸೃಷ್ಠಿ ಮಾಡಿರುತ್ತೀರಿ ಎಂದರೆ 1976ರಲ್ಲಿ ಆಗಿರುವುದು ಸತ್ಯ ಆಗಿದೆ ಎಂದು ಉತ್ತರಿಸುತ್ತಾರೆ. ಪಾಲುಪತ್ರವನ್ನು ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆ ಪಡೆಯಲಾರದೇ ಸಹಿ ಇಲ್ಲದೇ ಇರುವುದರಿಂದ ಸದರಿ ಪಾಲುಪತ್ರ ಊರ್ಜಿತ ಆಗುವುದಿಲ್ಲ ಎಂದರೆ ಪಾಲುಪತ್ರ ಆಗಿರುವುದು ನಿಜ ಇದೆ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಪಾರಂ ನಂ.10, 11 ಇ ಸ್ಕೆಚ್ ಆಗಿಲ್ಲ ಎಂದರೆ ಸಜನಾಪೂರ ಗ್ರಾಮದ ಎಲ್ಲಾ ಜಮೀನುಗಳಿಗೆ ಆಗಿಲ್ಲ ಎಂದು ಉತ್ತರಿಸುತ್ತಾರೆ. ಪಹಣಿಗಳಲ್ಲಿ ಇರುವಂತಹ ಹೇಸರುಗಳು ತಪ್ಪು ಮಾಹಿತಿಯಿಂದ ಕೂಡಿವೆ ಎಂದರೆ ಸತ್ಯವಾಗಿ ಆಗಿದೆ ಎಂದು ಉತ್ತರಿಸುತ್ತಾರೆ.

6. ದಾವಾದ ಆಸ್ತಿಗಳಲ್ಲಿ 4 ಮತ್ತು 5ನೇ ಪ್ರತಿವಾದಿಗಳಿಗೆ ಪಾಲಿನ ಹಕ್ಕು ಬರುವುದಿಲ್ಲ ಮತ್ತು ಇರುವುದೂ ಇಲ್ಲ ಎಂದರೆ ಅವರಿಗೆ ಮೊದಲು ಇದ್ದಿದ್ದಿಲ್ಲ ನಮ್ಮ ತಂದೆಯವರು ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಗಳಲ್ಲಿ 4 ಮತ್ತು 5ನೇ ಪ್ರತಿವಾದಿಗಳಿಗೆ ಭಾಗ ಕೊಡುವ ಅಧಿಕಾರ ನಿಮ್ಮ ತಂದೆಗೆ ಇರಲಿಲ್ಲ ಎಂದರೆ ತಂದೆಗೆ ಹುಟ್ಟಿದ್ದಾರೆ ಎಂದು ಅಧಿಕಾರ ಇದೆ ಎಂದು ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. 4 ಮತ್ತು 5ನೇ ಪ್ರತಿವಾದಿಗಳಿಗೆ ಮದುವೆ ಸಮಯದಲ್ಲಿ ಏನೇನು ಕೊಟ್ಟಿದ್ದಾರೆ ಎಂದರೆ ನಮ್ಮ ತಂದೆಯವರು ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. 4 ಮತ್ತು 5ನೇ ಪ್ರತಿವಾದಿಯರಿಗೆ ನಿಮ್ಮ ತಂದೆಯವರು ಯಾವುದಾದರೂ ರಿಜಿಸ್ಟರ್ ಪತ್ರಗಳು ಏನಾದರೂ ಮಾಡಿಕೊಟ್ಟಿದ್ದರಾ ಎಂದರೆ ನನಗೆ ಗೊತ್ತಿಲ್ಲ. ಆಸ್ತಿಗಳು 4 ಮತ್ತು 5ನೇ ಪ್ರತಿವಾದಿಯರಿಗೆ ಯಾವ ರೀತಿ

ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. 4 ಮತ್ತು 5ನೇ ಪ್ರತಿವಾದಿಯರಿಗೆ ಆಸ್ತಿಯನ್ನು ಕೊಡುವ ಸಮಯದಲ್ಲಿ ವಾದಿ, ಉಳಿದ ಕುಟುಂಬದ ಸದಸ್ಯರ ಒಪ್ಪಿಗೆ ಏನಾದರೂ ಪಡೆದುಕೊಂಡಿದ್ದಾರಾ ಮತ್ತು ಸಹಿ ಏನಾದರೂ ಪಡೆದುಕೊಂಡಿದ್ದಾರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. 4 ಮತ್ತು 5ನೇ ಪ್ರತಿವಾದಿಯರಿಗೆ ಆಸ್ತಿಯನ್ನು ಕೊಡುವ ಹಕ್ಕು ನಿಮ್ಮ ತಂದೆಯವರಿಗೆ ಇಲ್ಲ ಮತ್ತು 4 ಮತ್ತು 5ನೇ ಪ್ರತಿವಾದಿಯರು ಸದರಿ ಆಸ್ತಿಗೆ ಮಾಲೀಕರು ಆಗಲ್ಲ ಎಂದರೆ ನಮ್ಮ ತಂದೆಗೆ ಹುಟ್ಟಿದ್ದಾರೆ ಅವರಿಗೆ ಕೇಳುವಂತಹ ಹಕ್ಕು ಇದೆ ಅವರು ಕೇಳಿದ್ದಾರೆ ಎಂದು ಉತ್ತರಿಸುತ್ತಾರೆ. ವಾದಿ ಬಸಮ್ಮ ಬಸಣ್ಣಗೌಡನ ಮಗಳೋ ಅಥವಾ ಅಲ್ಲವೋ ಎಂದರೆ ಮಗಳು ಎಂದು ಉತ್ತರಿಸುತ್ತಾರೆ. ಕಾನೂನಾತ್ಮಕವಾಗಿ 4 ಮತ್ತು 5ನೇ ಪ್ರತಿವಾದಿಯರು ಬಸಣ್ಣಗೌಡನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. 4 ಮತ್ತು 5ನೇ ಪ್ರತಿವಾದಿಯರಿಗೆ ಮತ್ತು ನಿಮಗೆ ಯಾವುದೇ ರೀತಿಯಾದ ಸಂಬಂಧ ಇಲ್ಲ ಎಂದರೆ ಸಂಬಂಧ ಇದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯವರು ಬಸಮ್ಮಳಿಗೆ ಮದುವೆ ಆಗದೇ 4 ಮತ್ತು 5ನೇ ಪ್ರತಿವಾದಿಯರು ಹುಟ್ಟಿದ್ದಂತಹ ಮಕ್ಕಳು ಆಗಿದ್ದರಿಂದ ಅವರಿಗೆ ಆಸ್ತಿಯಲ್ಲಿ ಯಾವುದೇ ರೀತಿಯಿಂದ ಹಕ್ಕು ಇಲ್ಲ ಎಂದರೆ ಹಕ್ಕು ಇದೆ ಎಂದು ಉತ್ತರಿಸುತ್ತಾರೆ. ವಾದಿ ಬಸಮ್ಮರವರಿಗೆ ಭಾಗ ಕೊಡಬಾರದು ಎಂಬ ಉದ್ದೇಶದಿಂದ ಪಾಲುಪತ್ರವನ್ನು ಸೃಷ್ಠಿ ಮಾಡಿ ಪಹಣಿಗಳಲ್ಲಿ ನಿಮ್ಮ ಹೆಸರುಗಳನ್ನು ಸುಳ್ಳಾಗಿ ಮಾಡಿಕೊಂಡಿದ್ದೀರಿ ಎಂದರೆ ಸತ್ಯವಾಗಿ ಪಾಲು ಆಗಿದೆ ಎಂದು ಉತ್ತರಿಸುತ್ತಾರೆ. ಪಾಲುಪತ್ರದ ಮೂಲಕ ಎಲ್ಲಾ ಜನರಿಗೆ ಹಕ್ಕು ಬಂದಿದೆ ಎಂದು ಸುಳ್ಳಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಇವತ್ತಿನವರೆಗೂ ವಾದಿ ಬಸಮ್ಮಳಿಗೆ ದಾವಾದ ಆಸ್ತಿಯಲ್ಲಿ ಪಾಲು ಇದೆ ಎಂದರೆ ಪಾಲು ಇಲ್ಲ ಎಂದು ಉತ್ತರಿಸುತ್ತಾರೆ. 2004ರ ಮುಂಚೆ ಪಾಲು ಆಗಿದೆ ಆದ್ದರಿಂದ ವಾದಿಗೆ ಪಾಲು ಕೇಳುವ ಹಕ್ಕು ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ